**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 336/2024**

ಚಾ.ಸಾ–02, ಪ್ರಾ.ಸಾ–02

| | | |
|---|---|---|
| ಹೆಸರು | : | ಪುಟ್ಟರಾಜು |
| ತಂದೆಯ ಹೆಸರು | : | ಬಿಳಿಗಿರಿಯ್ಯ |
| ವಯಸ್ಸು | : | 45 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಕಿರಗಸೂರು ಗ್ರಾಮ, ತಿ. ನರಸೀಪುರ ತಾಲ್ಲೂಕು. |

**ದಿನಾಂಕ 18.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಫ್ರಾಸಾ–1, ಚಾಸಾ–3 ಮತ್ತು ಆರೋಪಿತನ ಪರಿಚಯವಿದೆ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪಂಚನಾಮ ಜರುಗಿಸಿಲ್ಲ. ಏನನ್ನೂ ಜಪ್ತಿಪಡಿಸಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

ನನಗೆ ಈಗ ತೋರಿಸಿದ ದಾಖಲೆಗಳಲ್ಲಿ ನನ್ನ ಸಹಿಗಳು ಇವೆ. ಸಾಕ್ಷಿಯ ಸಹಿಯಿರುವ ದಾಖಲೆಗಳು ಪಂಚನಾಮಗಳಾಗಿದ್ದು, ಅವುಗಳನ್ನು ನಿಪಿ.4, 5 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು. ನಿಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು**

**<u>ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.</u>**

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ</u>**

ದಿನಾಂಕ 13.04.2024 ರಂದು ತಿ. ನರಸೀಪುರ ತಾಲ್ಲೂಕಿನ ನಮ್ಮ ಗ್ರಾಮದ ಪ್ರಾಸಾ-1 ರವರ ಮನೆಯಲ್ಲಿ ಆಗಿದ್ದ ಕಳ್ಳತನ ಸಂಬಂಧ ದಿನಾಂಕ 14.04.2024 ರಂದು ಬೆಳಿಗ್ಗೆ 10.00 ರಿಂದ 11.00 ಗಂಟೆ ಸಮಯದಲ್ಲಿ ಸದರಿ ಸ್ಥಳದಲ್ಲಿ ಪ್ರಾಸಾ-1 ರವರು ತೋರಿಸಿದಂತೆ ಪೊಲೀಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿಪಿ.2 ರಂತೆ ಪಂಚನಾಮವನ್ನು ಜರುಗಿಸಲಾಯಿತು ಎಂದರೆ ಸರಿಯಲ್ಲ.

ದಿನಾಂಕ 01.06.2024 ರಂದು ಸಂಜೆ 4.00 ರಿಂದ 4.45 ಗಂಟೆ ಸಮಯದಲ್ಲಿ ತಿ. ನರಸೀಪುರ ಪಟ್ಟಣದ ಮಾರುಕಟ್ಟೆ ರಸ್ತೆಯಲ್ಲಿರುವ ಶ್ರೀ ಭವಾನಿ ಜ್ಯುವೆಲರ್ಸ್ ಬಳಿ ಆರೋಪಿತ ತೋರಿಸಿದಂತೆ ಪೊಲೀಸರು ನನ್ನ ಮತ್ತು ಚಾಸಾ-4, 5 ರವರ ಸಮಕ್ಷಮ ನಿಪಿ.4 ರಂತೆ ಪಂಚನಾಮವನ್ನು ಜರುಗಿಸಿ, ಚಾಸಾ-4 ರವರು ಹಾಜರುಪಡಿಸಿದ ಉಂಗುರವನ್ನು ಜಪ್ತಿಪಡಿಸಲಾಯಿತು ಎಂದರೆ ಸರಿಯಲ್ಲ.

ಅದೇ ದಿನ ಸಂಜೆ 5.15 ರಿಂದ 6.00 ಗಂಟೆ ಸಮಯದಲ್ಲಿ ಘಟನಾ ಸ್ಥಳದಲ್ಲಿ ಆರೋಪಿತ ತೋರಿಸಿದಂತೆ ಪೊಲೀಸರು ನನ್ನ ಮತ್ತು ಚಾಸಾ-6 ರವರ

ಸಮಕ್ಷಮ ನಿಪಿ.5 ರಂತೆ ಪಂಚನಾಮವನ್ನು ಜರುಗಿಸಲಾಯಿತು ಎಂದರೆ ಸರಿಯಲ್ಲ.

ಅದೇ ದಿನ ಪೊಲೀಸರಿಗೆ ಘಟನೆಯ ಕುರಿತು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ.6 ಎಂದು ಗುರುತಿಸಲಾಯಿತು.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ</u>** : ಏನೂ ಇಲ್ಲ.

**<u>ಮರು ವಿಚಾರಣೆ ಇರುವುದಿಲ್ಲ.</u>**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 336/2024**

ಚಾ.ಸಾ–03, ಪ್ರಾ.ಸಾ–03

| | | |
|---|---|---|
| ಹೆಸರು | : | ಮಹದೇವ |
| ತಂದೆಯ ಹೆಸರು | : | ಲೇಟ್ ಕರಿಮಲ್ಲೇಗೌಡ |
| ವಯಸ್ಸು | : | 55 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಕಿರಗಸೂರು ಗ್ರಾಮ, ತಿ. ನರಸೀಪುರ ತಾಲ್ಲೂಕು. |

**ದಿನಾಂಕ 18.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಪ್ರಾಸಾ–1, 2 ಮತ್ತು ಆರೋಪಿತನ ಪರಿಚಯವಿದೆ. ನನ್ನ ಸಮಕ್ಷಮ ಪಂಚನಾಮ ಜರುಗಿಸಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯಿರುವ ದಾಖಲೆಯು ಸ್ಥಳ ಪಂಚನಾಮವಾಗಿದ್ದು, ಅದು ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಸಿಸಿ ಸಂಖ್ಯೆ: 336/2024

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 13.04.2024 ರಂದು ತಿ. ನರಸೀಪುರ ತಾಲ್ಲೂಕಿನ ನಮ್ಮ ಗ್ರಾಮದ ಫ್ರಾಸಾ–1 ರವರ ಮನೆಯಲ್ಲಿ ಆಗಿದ್ದ ಕಳ್ಳತನ ಸಂಬಂಧ ದಿನಾಂಕ 14.04.2024 ರಂದು ಬೆಳಿಗ್ಗೆ 10.00 ರಿಂದ 11.00 ಗಂಟೆ ಸಮಯದಲ್ಲಿ ಸದರಿ ಸ್ಥಳದಲ್ಲಿ ಫ್ರಾಸಾ–1 ರವರು ತೋರಿಸಿದಂತೆ ಪೊಲೀಸರು ನನ್ನ ಮತ್ತು ಫ್ರಾಸಾ–2 ರವರ ಸಮಕ್ಷಮ ನಿಪಿ.2 ರಂತೆ ಪಂಚನಾಮವನ್ನು ಜರುಗಿಸಲಾಯಿತು ಎಂದರೆ ಸರಿಯಲ್ಲ.

ದಿನಾಂಕ 14.04.2024 ರಂದು ಪೊಲೀಸರಿಗೆ ಘಟನೆಯ ಕುರಿತು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ.7 ಎಂದು ಗುರುತಿಸಲಾಯಿತು.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ** : ಏನೂ ಇಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**